

ಟೆಸ್ಟ್ ಕ್ರಿಕೆಟ್‌ನಲ್ಲಿ 500 ವಿಕೆಟ್‌ಗಳ ಬೆಳ್ಳಿಗೆರೆ ದಾಟಿರುವ ಇಂಗ್ಲೆಂಡ್‌ನ ಬ್ರಾಡ್



ಟೆಸ್ಟ್ ಕ್ರಿಕೆಟ್‌ನಲ್ಲಿ ಅತಿ ಹೆಚ್ಚು ವಿಕೆಟ್ ಪಡೆದ ಮೊದಲ, ಎರಡನೇ ಬೌಲರ್‌ಗಳೆನಿಸಿದ್ದಾರೆ. 38 ವಯಸ್ಸಿನ ಆ್ಯಂಡರ್ಸನ್ ಹಳೆಯದ್ದೇ ಲಯದಲ್ಲಿ ಓಡಿಬರುವುದನ್ನು ನೋಡಿದರೆ, 34ರ ಬ್ರಾಡ್ ಹುಮ್ಮಸ್ಸು ಹೆಚ್ಚುವುದರಲ್ಲಿ ಅನುಮಾನವೇ ಇಲ್ಲ.

ಇನ್ನೊಂದು ತುದಿಯಲ್ಲಿ ಈ ಇಬ್ಬರೂ ಅನುಭವಿಗಳನ್ನು ಹೋಲ್ಡರ್ ನಂಥ ಮಗುವಿನ ಮುಖದ ನಾಯಕ ಕಣ್ತುಂಬಿಕೊಳ್ಳುವ ಅವಕಾಶ ಸಿಕ್ಕಿದ್ದು ಕ್ರಿಕೆಟ್ ನ ರಸಾನುಭವವೇ ಹೌದು.

ಜೇಸನ್ ಹೋಲ್ಡರ್ ಇನ್ನೂ 28ರ ಯುವಕ. ಆರ್ಥಿಕವಾಗಿ ಬಡವಾಗಿರುವ ಸಂಸ್ಥೆಯಿಂದ ಹೆಚ್ಚಿನದನ್ನು ಬಯಸದೆ, ದೇಸಿ ಕ್ರಿಕೆಟ್‌ನ ಸಾಣೆ ಸಿಕ್ಕದೆ ಮನೋಬಲ ಕ್ಷೀಣವಾಗಿರುವ ಆಟಗಾರರನ್ನು ಹುರಿದುಂಬಿಸುತ್ತಾ, ಟೆಸ್ಟ್ ಕ್ರಿಕೆಟ್‌ನ ನಾಯಕತ್ವದ ನೊಗ ಹೊತ್ತುಕೊಳ್ಳುವುದು ಇಂಥ ಆಟಗಾರನಿಗೆ ಹೊರೆಯೇ ಸರಿ. ಅವರು ಅದನ್ನು ಹೊತ್ತರು. ಸೋತಮೇಲೆ 'ನಮ್ಮ ದೇಶಕ್ಕೂ ಬಂದು ಆಡಿ... ನಮ್ಮನ್ನು ಉಳಿಸಿ' ಎಂದು ಮೊರೆಯಿಟ್ಟರು. ಹೀಗೆ ಮೊರೆಯಿಟ್ಟದ್ದು ಭಿಕ್ಷಾಯಾಚನೆಯ ಧಾಟಿಯಲ್ಲಿ ಅಲ್ಲ; ಅವರೊಳಗೆ ಇರುವ ಅದಮ್ಯ ಕ್ರಿಕೆಟ್ ಪ್ರೀತಿ ಹೊಮ್ಮಿಸಿದ ಆರ್ತನಾದದಿಂದ.

ಕೆರೀಬಿಯನ್ನರು ಇಂಗ್ಲೆಂಡ್ ನೆಲದಲ್ಲಿ ಕ್ರಿಕೆಟ್ ಆಡಲು ಒಪ್ಪಿದ್ದೇ ದೊಡ್ಡ ವಿಷಯ. ಕೊರೊನಾ ಸೋಂಕು ಇಂಗ್ಲೆಂಡ್‌ನಲ್ಲಿ ದೊಡ್ಡ ಸಂಖ್ಯೆಯಲ್ಲಿ ಜೀವಗಳನ್ನೇ ತೆಗೆದುಕೊಂಡ ಹೊತ್ತಿನಲ್ಲಿ 'ನಾವು ಬಂದೇವ' ಎನ್ನುವುದು ತಮಾಷೆಯೇ? ವೇಗದ ಬೌಲರ್‌ಗಳ ಜಂಘಾಬಲವನ್ನೇ ನೆಚ್ಚಿಕೊಂಡ ತಂಡ ವಿಂಡೀಸ್. ಇಂಗ್ಲೆಂಡ್ ಅಂತೂ ಕ್ರಿಸ್ ವೋಕ್ಸ್ ರೂಪದಲ್ಲಿ ವೇಗದ ಬೌಲಿಂಗ್‌ನ ಹೊಸ ಇಂಧನವನ್ನೂ ಇಟ್ಟುಕೊಂಡಿದೆ. ಅಲ್ಲಿಗೆ ಬಂದು, ಪರಿಸ್ಥಿತಿಗೆ ಹೊಂದಿಕೊಂಡು, ಎಲ್ಲಿಯೂ ತಿರುಗಾಡದೆ, ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಂಡು, ಚೆಂಡಿಗೆ ಎಂಜಲು ಸೋಕಿಸದೆ ಕ್ರಿಕೆಟ್ ಆಡುವ ಪ್ರಕ್ರಿಯೆಯೇ ಹೊಸತು. ಅದಕ್ಕೆ ಕೆರೀಬಿಯನ್ನರು ಹೃದಯಾಂತರಾಳದಿಂದ ಒಗ್ಗಿಕೊಂಡರು.

ಪರದೆ ತೆಗೆದರೆ ಮೈದಾನ. ಮೈದಾನದಿಂದ ಒಳನಡೆದರೆ ಅದೇ ತಂಗುದಾಣ. ಮನರಂಜನೆ ಬೇಕೆನಿಸಿದರೂ ಕ್ರಿಕೆಟ್ ಮೈದಾನದಲ್ಲೇ ಕಂಡುಕೊಳ್ಳಬೇಕು. ಎಂಜಲಿನ ಬದಲು ಚೆಂಡಿಗೆ ಚೂರೇಚೂರು ಬೆವರು ಮೆತ್ತಬೇಕು (ಹೆಚ್ಚು ಮೆತ್ತಿದರೆ ಚೆಂಡೇ ಹಾಳಾಗುತ್ತದೆ). ಹೀಗೆಲ್ಲ ಕ್ರಿಕೆಟ್ಟನ್ನು ಇಂಗ್ಲೆಂಡ್‌ಗೆ ಬಂದು ಜೀವಿಸಿದ ವಿಂಡೀಸ್ ತಂಡದ ಆಟಗಾರರು ನಿಜಕ್ಕೂ ಇನ್ನೂ ಚೆನ್ನಾಗಿ ಆಡಬೇಕಿತ್ತು.

ಸೌತ್ ಆ್ಯಂಪ್ಟನ್‌ನಲ್ಲಿ ಮೊದಲ ಟೆಸ್ಟ್ ಪಂದ್ಯ ಶುರುವಾಗುವ ಒಂದು ದಿನ ಮೊದಲು ಸಚಿನ್ ತೆಂಡೂಲ್ಕರ್ ವಿಂಡೀಸ್ ನಾಯಕ ಜೇಸನ್ ಹೋಲ್ಡರ್ ಅವರನ್ನು ತುಂಬು ಹೃದಯದಿಂದ ಹೊಗಳಿದ್ದರು. 'ಆತ ಅಂಡರ್ ರೇಟೆಡ್ ಆಲ್‌ರೌಂಡರ್. ಆದರೆ, ತುಂಬಾ ಪ್ರತಿಭಾವಂತನಿದ್ದಾನೆ. ಮಾಗುತ್ತಾ ಹೋದರೆ ಒಳ್ಳೆಯ ಭವಿಷ್ಯವಿದೆ' ಎಂದು ಸಚಿನ್ ಹೇಳಿದ್ದು ಅದೆಷ್ಟು ನಿಜ ಎಂದು ಮೊದಲ ಟೆಸ್ಟ್‌ನಲ್ಲೇ ಅನಿಸಿತು. ಪ್ರಥಮ ಟೆಸ್ಟ್‌ನ ಮೊದಲ ಇನಿಂಗ್ಸ್‌ನಲ್ಲಿ ಹೋಲ್ಡರ್ ಆರು ವಿಕೆಟ್ ತೆಗೆದ ಬಗೆ ನೋಡಿದಾಗ ಸಚಿನ್ ಭವಿಷ್ಯಕಾರರೇ ಹೌದಲ್ಲವೇ ಅನಿಸಿದ್ದೂ ಸುಳ್ಳಲ್ಲ. ಈ ಹೋಲ್ಡರ್ ಕೂಡ ಕಚ್ಚಾ ಪ್ರತಿಭೆಗಳ ಮೋಹಿ. ಶಾನನ್ ಗೇಬ್ರಿಯೆಲ್ ಎಂಬ ಬೌಲರ್ ಆಡುವ ಹನ್ನೊಂದರಲ್ಲಿ ಒಬ್ಬನಾಗುವನೋ ಇಲ್ಲವೋ ಎಂಬ ಪ್ರಶ್ನೆ ವಿಂಡೀಸ್ ತಂಡ ಇಂಗ್ಲೆಂಡ್ ಗೆ ಬಂದಿಳಿದಾಗಲೂ ಇತ್ತು. ಮೊದಲ ಟೆಸ್ಟ್‌ನಲ್ಲಿ ಆ ಪ್ರಶ್ನೆಗೆ ಹೋಲ್ಡರ್ ಉತ್ತರ ಕೊಟ್ಟರು. ಗೇಬ್ರಿಯಲ್ ಕೈಗೆ ಚೆಂಡು ಕೊಟ್ಟರು. ಈ ದೈತ್ಯ ಬೌಲರ್ ಮೊದಲ ಹೆಜ್ಜೆಯಿಂದ ಚೆಂಡು ಎಸೆಯುವವರೆಗೆ ಮೈದಾನದಲ್ಲಿ ಹೊಮ್ಮುವ ಶಬ್ದವೇ ಆತನ ವೇಗೋತ್ಕರ್ಷ ಎಂಥದೆನ್ನುವುದಕ್ಕೆ ಕನ್ನಡಿ ಹಿಡಿಯುತ್ತದೆ. ಮೂರು ಟೆಸ್ಟ್‌ಗಳಲ್ಲಿ ಈ ಪ್ರತಿಭಾವಂತ 11 ವಿಕೆಟ್‌ಗಳನ್ನು ಪಡೆದದ್ದೇ ಇದಕ್ಕೆ ಸಾಕ್ಷಿ. ಬ್ರಾಡ್ ಎರಡೇ ಟೆಸ್ಟ್‌ಗಳಲ್ಲಿ 16 ವಿಕೆಟ್ ಪಡೆದು ಅನುಭವದ ಪಾಠ ಮಾಡಿದರು. ವೋಕ್ಸ್ ಕೂಡ ಎರಡೇ ಪಂದ್ಯಗಳಲ್ಲಿ 11 ವಿಕೆಟ್ ಪಡೆದು, ಗೇಬ್ರಿಯಲ್ ತರಹದವರಿಗೆ ಸ್ವಿಂಗ್ ಬೌಲಿಂಗ್‌ನ ಪ್ರಾತ್ಯಕ್ಷಿಕೆ ನೀಡಿರಲಿಕ್ಕೂ ಸಾಕು.

ವೇಗದ ಬೌಲರ್‌ಗಳನ್ನು ಇಷ್ಟಾಗಿ ನೆಚ್ಚಿಕೊಳ್ಳುತ್ತಿರುವಾಗಲೇ ಹೋಲ್ಡರ್ ಹಾಗೂ ಇಂಗ್ಲೆಂಡ್ ನಾಯಕ ಬೆನ್ ಸ್ಟೋಕ್ಸ್ ಇಬ್ಬರೂ ವೈಯಕ್ತಿಕ ನೆಲೆಗಟ್ಟಿನಿಂದ ಗಮನಸೆಳೆದರು. ಇಬ್ಬರೂ ಆಲ್ ರೌಂಡರ್ ಗಳು. 90.5ರ ಸರಾಸರಿಯಲ್ಲಿ 363 ರನ್ ಕಲೆಹಾಕಿದ್ದಲ್ಲದೆ 9 ವಿಕೆಟ್ ಗಳನ್ನು ಕೂಡ ಕಿತ್ತ ಸ್ಟೋಕ್ಸ್ ವಿಶ್ವಕಪ್ ವಿಕ್ರಮದ ಆತ್ಮವಿಶ್ವಾಸದ ಅಲೆ ಮೇಲೆ ಇನ್ನೂ ತೇಲುತ್ತಿದ್ದಾರೆ. 176 ರನ್‌ಗಳ ದೊಡ್ಡ ಇನಿಂಗ್ಸ್ ಅದಕ್ಕೆ ಸಾಕ್ಷಿ. ಬರ್ನ್ಸ್, ಸಿಬ್ಲಿ, ಬ್ಲ್ಯಾಕ್ ವುಡ್ ನಾಯಕನ ಉಮೇದಿಗೆ ರೆಕ್ಕೆಪುಕ್ಕ ಹಚ್ಚಿದ ಇಂಗ್ಲೆಂಡ್‌ನ ಬ್ಯಾಟ್ಸ್‌ಮನ್‌ಗಳು.

ಹೋಲ್ಡರ್ ಒಂದೂ ಅರ್ಧ ಶತಕ ಗಳಿಸದೇ ಹೋದದ್ದು ಅವರ ಭುಜದ ಮೇಲಿನ ನೊಗದ ಭಾರಕ್ಕೆ ಉದಾಹರಣೆ. ಆದರೆ, 10 ವಿಕೆಟ್‌ಗಳು ಅವರ ಖಾತೆಗೆ ಸೇರಿದ್ದು ಪಟ್ಟ ಶ್ರಮಕ್ಕೆ ಹಿಡಿದ ಕನ್ನಡಿ. ಚೇಸ್, ರೋಚ್ ಬೌಲಿಂಗ್‌ನಲ್ಲಿ ಸಾಥ್ ಕೊಟ್ಟಿದ್ದೇನೋ ನಿಜ. ಆದರೆ, ವಿಂಡೀಸ್ ನ ಬ್ಯಾಟಿಂಗ್ ಮೊದಲಿನಿಂದಲೂ ತಡಬಡಾಯಿಸಿತು. ಒಂದು ಇನಿಂಗ್ಸ್‌ನಲ್ಲಿ 75 ರನ್ ಗಳಿಸಿದ ಕ್ರೇಗ್ ಬ್ರಾಥ್ ವೈಟ್, ಬ್ರಾಡ್ ಪಡೆದ 500ನೇ ಟೆಸ್ಟ್ ವಿಕೆಟ್ ಆದದ್ದೂ ವಿಶೇಷ. 2017ರಲ್ಲಿ ಇದೇ ಬ್ಯಾಟ್ಸ್‌ಮನ್ ಆ್ಯಂಡರ್ಸನ್ ಪಡೆದ 500ನೇ ವಿಕೆಟ್ ಕೂಡ ಆಗಿದ್ದುದು ಕಾಕತಾಳೀಯವಷ್ಟೆ. ಹೋಪ್, ಕ್ಯಾಂಪ್ ಬೆಲ್, ಜೋಸೆಫ್ ವಿಂಡೀಸ್‌ನ ಎಲ್ಲ ಬ್ಯಾಟ್ಸ್‌ಮನ್‌ಗಳು ಸುಖಾಸುಮ್ಮನೆ ವಿಕೆಟ್ ಒಪ್ಪಿಸಿದ ಬಗೆಯೂ ಅಧ್ಯಯನಯೋಗ್ಯ.

2007ರಲ್ಲಿ ಟ್ವೆಂಟಿ–20 ವಿಶ್ವಕಪ್ ಕ್ರಿಕೆಟ್‌ನಲ್ಲಿ ಸ್ಟುವರ್ಟ್ ಬ್ರಾಡ್ ಹಾಕಿದ ಒಂದು ಓವರ್‌ನ ಆರೂ ಎಸೆತಗಳನ್ನು ಭಾರತದ ಯುವರಾಜ್ ಸಿಂಗ್ ಸಿಕ್ಸರ್‌ಗೆ ಅಟ್ಟಿದ್ದರು. ಬ್ರಾಡ್ ಟೆಸ್ಟ್ ಕ್ರಿಕೆಟ್ ಗೆ ಕಾಲಿಟ್ಟ ವರ್ಷವೂ ಅದೇ. 500 ವಿಕೆಟ್‌ಗಳ ಗಡಿ ದಾಟುವಷ್ಟು ಅವರೀಗ ಮಾಗಿರುವುದು ಟೆಸ್ಟ್ ಕ್ರಿಕೆಟ್‌ನ ಪ್ರಮುಖ ಅಧ್ಯಾಯ. ಇಂತಹ ಯಾವುದಾದರೂ ಅಧ್ಯಾಯವನ್ನು ವಿಂಡೀಸ್ ಕ್ರಿಕೆಟ್‌ನ ಈಗಿನ ಆಟಗಾರರೂ ರೂಪಿಸುವಂತಾಗಲಿ ಎಂಬ ಹಾರೈಕೆ ಕೂಡ ಮಂಕಾಗಿ ಕಾಣುತ್ತಿರುವ ಹೊತ್ತಿದು. ಬ್ರಯಾನ್ ಲಾರಾ, ಕರ್ಟ್ನಿ ವಾಲ್ಷ್ ತರಹದ ಹಳೆಯ ಅಧ್ಯಾಯಗಳನ್ನೇ ಇನ್ನೆಷ್ಟು ಕಾಲ ನೆನಪಿಸಿಕೊಳ್ಳುತ್ತಾ ಇರುವುದು. ಹೋಲ್ಡರ್ ಗೆ ಧಿಗ್ಗನೆ ಹೊತ್ತಿಕೊಳ್ಳುವ ಬಲ್ಬೊಂದು ಖಂಡಿತ ಬೇಕಾಗಿದೆ.

ಪ್ರತಿಕ್ರಿಯಿಸಿ: feedback@sudha.co.in